ಓಡಾಡತೊಡಗಿದ್ದಾನೆ. **demonetisation**ನಿಂದ ತನ್ನಷ್ಟು ಕಳೆದುಕೊಂಡ ಹಣ ಮೆಲ್ಲ ಮೆಲ್ಲನೆ ಆತನ ಕಡೆ ಹರಿಯತೊಡಗಿದೆ ಮತ್ತು ಅದರಲ್ಲಿ ನನ್ನ ಪಾಲೂ ಸೇರಿಕೊಳ್ಳತೊಡಗಿದೆ. ಮುಂದಿನವಾರ ಪುಣೆಯಲ್ಲಿ ಹಸಿವು ಮತ್ತು ಕಾಮ ಎರಡನ್ನೂ ಉದ್ದೀಪನಗೊಳಿಸುವ ಪಿಲ್ಸ್ ತಯಾರಿಕೆಯ ಫ್ಯಾಕ್ಟರಿಯನ್ನು ಉದ್ಘಾಟಿಸಲಾಗುತ್ತಿದ್ದು, ಮುಂಬಯಿಯನ್ನು ಮೊದಲ ಮಾರುಕಟ್ಟೆಯಾಗಿ ಗುರಿಯಾಗಿರಿಸಿಕೊಳ್ಳಲಾಗಿದೆ. ಕೇವಲ ಹತ್ತು ರೂಪಾಯಿಗೆ ಒಂದು ಪಿಲ್ಸ್‌ಅನ್ನು ಮಾರುಕಟ್ಟೆ ಮಾಡಲು ತೀರ್ಮಾನಿಸಲಾಗಿದೆ. ಇಂಥ ಅದ್ಭುತ ಪಿಲ್ಸ್‌ನ ರಾಸಾಯನಿಕ ಸೂತ್ರವನ್ನು ಮಾಡಿಕೊಟ್ಟಿರುವುದು ಬನಾರಸ್‌ನಲ್ಲಿರುವ ಬಾಬಾ ಧಾತುಸೇನ. ಆತ ರಾಘವ ಪಂತುಲುವಿನ ಹೈಸ್ಕೂಲು ಕ್ಲಾಸ್‌ಮೇಟ್ ಅಂತೆ!

ವಿಮಾನ ಲ್ಯಾಂಡ್ ಆಗುವುದರ ಬಗ್ಗೆ ಗಗನಸಖಿ ಅನೌನ್ಸ್ ಮಾಡುವುದರೊಂದಿಗೆ ನಾನು ನೆನಪುಗಳಿಂದ ಕಳಚಿಕೊಂಡಿದ್ದೆ. ನೀಲಾಂಜನ ಎಚ್ಚರಗೊಂಡಿದ್ದಳು. ವಿಮಾನ ನಿಲ್ದಾಣದಲ್ಲಿ ತಾಜ್ ಹೋಟೆಲ್‌ನ ಲಕ್ಸುರಿ ಕಾರು ನಮಗಾಗಿ ಕಾದು ನಿಂತಿತ್ತು. ಹೋಟೆಲ್ ರೂಮಿಗೆ ಹೋಗಿ, ಫ್ರೆಶ್‌ಅಪ್ ಆಗಿ ನಾನು ನೀಲಾಂಜನಾಳೊಂದಿಗೆ ಆ ಮನೆಯನ್ನು ಪ್ರವೇಶಿಸಿದಾಗ ರಾತ್ರಿ ಒಂಬತ್ತು ಗಂಟೆಯಾಗಿತ್ತು. ನಮ್ಮ ಭೇಟಿಯ ಸಮಯ ನಿಗದಿಯಾಗಿದ್ದದ್ದು ಸಂಜೆ ಏಳು ಗಂಟೆಗೆ. ವಿಮಾನ ಎರಡು ಗಂಟೆ ತಡವಾದ್ದರಿಂದ ನಾವೂ ತಡವಾಗಿ ಬಂದಿದ್ದೆವು. ಹೊರಗಡೆಯಿಂದ ಮನೆ ಹಳೆಯದಾಗಿ ಕಂಡರೂ ಒಳಗೆ ಹವಾನಿಯಂತ್ರಿತ ವ್ಯವಸ್ಥೆಯೂ ಒಳಗೊಂಡಂತೆ ಸೋಫಾ, ಫ್ರಿಡ್ಜ್ ಮುಂತಾದ ಸರಳ ರೀತಿಯ ಸಾಂಪ್ರದಾಯಿಕ ಆಧುನಿಕ ಸೌಲಭ್ಯಗಳೂ ಗೋಚರಿಸಿದ್ದವು. ಕರೆಂಟು ಹೋಗಿದ್ದರಿಂದ ಮಬ್ಬು ವಾತಾವರಣ ನೆಲೆಗೊಂಡಿತ್ತು. ನಡುಮನೆಯ ಮಧ್ಯದಲ್ಲಿ ಸಣ್ಣದಾಗಿ ಉರಿಯುತ್ತಿದ್ದ ಹೋಮಕುಂಡದ ಮುಂದೆ ವಜ್ರಾಸನದಲ್ಲಿ ಕುಳಿತಿದ್ದ ಬಾಬಾ ಧಾತುಸೇನರು ಮಂದಬೆಳಕಿನಲ್ಲಿ ಅಮಲಿನಲ್ಲಿ ಅದ್ದಿ ತೆಗೆದ ದೊಡ್ಡ ಗರುಡಪಕ್ಷಿಯಂತೆ ಕಾಣುತ್ತಿದ್ದರು. ಬಾಬಾರ ಅನುಯಾಯಿ ನಮಗೆ ಸೋಫಾದ ಮೇಲೆ ಕುಳಿತುಕೊಳ್ಳಲು ಕೈಸನ್ನೆ ಮಾಡಿದ್ದರೂ ನಾನೂ ಮತ್ತು ನೀಲಾಂಜನ ನೆಲದ ಮೇಲೆ ಹಾಸಿದ್ದ ಜಮಖಾನದ ಮೇಲೆಯೇ ಕುಳಿತುಕೊಂಡಿದ್ದೆವು. ಫರ್ಲಾಂಗು ದೂರದಲ್ಲಿ

